ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ಕ್ರಮ ಸಂ.	ಮೆ.ಪೂ./ಮೆ.ನಂ. ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯದ ಸಂಖ್ಯಾಬಲಕ್ಕೆ	ನಿ.ಪಾ/ ನಿ.ಮೇ.	ಸಿಬ್ಬಂದಿ ಮಾದರಿ ಅಡುಗೆಯವರು	ಅ.ಸ.	ರಾ.ಕಾ.
1.	25	01	01	01	ಮೆ.ಪೂ./ಮೆ.ನಂ.
2.	50	01	02	01	ಬಾಲಕಿಯರ
3.	75	01	02	02	ವಿದ್ಯಾರ್ಥಿನಿಲಯ
4.	100	01	03	02	ಗಳಿಗೆ ಸಂಬಂಧಪಟ್ಟಂತೆ ರಾತ್ರಿ
5	125	01	03	02	ಕಾವಲುಗಾರರ
6	150	01	04	02	ಒಂದೊಂದು
7	175	01	04	02	ಹುದ್ದೆಗಳು
8	200	01	05	02	ಇರುತ್ತದೆ.

ಆ) ಹೌದು

ಇ) ಜಿಲ್ಲಾ ಮಟ್ಟದಲ್ಲಿ ಕೊರತೆ ಇರುವ ಗ್ರೂಪ್ ಡಿ ವೃಂದದ ಅಡುಗೆಯವರು ಅಡುಗೆ ಸಹಾಯಕರ ಹುದ್ದೆಗಳನ್ನು ನೇರ ನೇಮಕಾತಿ ಭರ್ತಿ ಮಾಡುವವರೆಗೆ ಹೊರಸಂಪನ್ಮೂಲದ ಮೇರೆಗೆ ಅಡುಗೆಯವರು ಅಡುಗೆ ಸಹಾಯಕರು ರಾತ್ರಿಕಾವಲುಗಾರರ ಸೇವೆಯನ್ನು ಪಡೆದುಕೊಂಡು ನಿಲಯಗಳನ್ನು ನಿರ್ವಹಿಸಲಾಗುತ್ತಿದೆ.

ಈ) ಹೌದು

ಆಯವ್ಯಯದಲ್ಲಿನ ಅನುದಾನದ ಲಭ್ಯತೆ ಆಧರಿಸಿ ಹಂತ-ಹಂತವಾಗಿ ಸ್ವೀಮ್ ಕುಕ್ಕಿಂಗ್ ಅಳವಡಿಸಲು ಕ್ರಮವಹಿಸಲಾಗುತ್ತಿದೆ.

ನಗರ ಪ್ರದೇಶಗಳಲ್ಲಿ ವಸತಿ ಸಮಸ್ಯೆಗಳ ನಿವಾರಣೆಗಾಗಿ ಸರ್ಕಾರದ ಯೋಜನೆಗಳು

172 (537) ಶ್ರೀ ಹ್ಯಾರೀಸ್ ಎನ್. ಎ (ಶಾಂತಿನಗರ) :- ಮಾನ್ಯ ವಸತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ರಾಜ್ಯದಲ್ಲಿರುವ ನಗರ ಮತ್ತು ಮಹಾನಗರ ಪ್ರದೇಶಗಳಲ್ಲಿ ಬಡ ಜನರು ಮಾಧ್ಯಮವರ್ಗದವರು ಎದುರಿಸುತ್ತಿರುವ ವಸತಿ ಸಮಸ್ಯೆಗಳ ನಿವಾರಣೆಗಾಗಿ ಸರ್ಕಾರ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಯಾವುವು (ವಿವರ ನೀಡುವುದು) ?

ಆ) ಕಳೆದ ಮೂರು ವರ್ಷಗಳಲ್ಲಿ ನಗರ ಪ್ರದೇಶಗಳ ವಸತಿ ವ್ಯವಸ್ಥೆಗಾಗಿ ಜಾರಿಗೊಳಿಸಿದ ಕ್ರಮಗಳ ವಿವರಗಳೇನು? ಆಮೂಲಕ ಬಡ ಜನರಿಗೆ ಮನೆಗಳನ್ನು ಒದಗಿಸಿಕೊಡಲಾಗಿದೆಯೇ ? ಈ ಅವಧಿಯಲ್ಲಿ ರಾಜ್ಯ ಮತ್ತು ಕೇಂದ್ರ ಸರ್ಕಾರದವರು ವಸತಿ ಯೋಜನೆಗಾಗಿ ಮಂಜೂರು ಮಾಡಿದ ಮತ್ತು ಖರ್ಚು ಮಾಡಿದ ಅನುದಾನವೆಷ್ಟು ವಿವರ ನೀಡುವುದು ?

ಇ) ವಸತಿ ಇಲಾಖೆ ವ್ಯಾಪ್ತಿಗೆ ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಒದಗಿಸಿಕೊಟ್ಟ ಜಮೀನಿನ ಒಟ್ಟು ವಿಸ್ತಾರ ಎಷ್ಟು (ಜಿಲ್ಲಾವಾರು ಪ್ರಮಾಣವನ್ನು ನೀಡುವುದು) ?

ಶ್ರೀ ವಿ. ಸೋಮಣ್ಣ (ಮಾನ್ಯ ವಸತಿ ಸಚಿವರು):-

ಅ) **ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದಿಂದ**

ರಾಜ್ಯದಲ್ಲಿರುವ ನಗರ ಮತ್ತು ಮಹಾನಗರ ಪ್ರದೇಶಗಳಲ್ಲಿ ಬಡ ಜನರಿಗೆ ಮತ್ತು ಮದ್ಯಮವರ್ಗದವರಿಗೆ ಎದುರಿಸುತ್ತಿರುವ ವಸತಿ ಸಮಸ್ಯೆಗಳ ನಿವಾರಣೆಗಾಗಿ ನಿಗಮದಿಂದ ಈ ಕೆಳಗಿನಂತೆ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. ನಗರ ಆಶ್ರಯ
2. ನಗರ ಆಶ್ರಯ ವಿಶೇಷ ವರ್ಗದ ಯೋಜನೆ (ದೇವದಾಸಿ)
3. ವಾಜಪೇಯಿ ನಗರ ವಸತಿ ಯೋಜನೆ

ಕರ್ನಾಟಕ ಗೃಹ ಮಂಡಳಿ:

ಕರ್ನಾಟಕ ಗೃಹ ಮಂಡಳಿ ವತಿಯಿಂದ ನಗರ ಮತ್ತು ಮಹಾನಗರ ಪ್ರದೇಶಗಳಲ್ಲಿ ಬಡ ಜನರು ಮತ್ತು ಮಧ್ಯಮ ವರ್ಗದ ಜನರಿಗೆ ಕರ್ನಾಟಕ ಗೃಹ ಮಂಡಳಿಯಿಂದ ಅನುಷ್ಠಾನಗೊಳಿಸುತ್ತಿರುವ ಮನೆ ಮತ್ತು ನಿವೇಶನಗಳನ್ನು ಹಂಚಿಕೆ ಮಾಡಲು ಅಭಿವೃದ್ಧಿ ಪಡಿಸುತ್ತಿರುವ ಯೋಜನೆಗಳ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಲಾಗಿದೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ:

ರಾಜ್ಯದಲ್ಲಿರುವ ಆಯ್ದ ಮಹಾನಗರ ಪಾಲಿಕೆ ನಗರಸಭೆ ಮತ್ತು ಪುರಸಭೆ ವ್ಯಾಪ್ತಿಗಳಲ್ಲಿರುವ ಕೊಳಚೆ ಪ್ರದೇಶಗಳಲ್ಲಿನ ನಿವಾಸಿಗಳಿಗೆ ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಕೇಂದ್ರ ಪುರಸ್ಕೃತ ಜೆ.ಎನ್.ಎನ್.ಯು.ಆರ್. ಎಂ. – ಬಿಎಸ್‌ಯುಪಿ ಯೋಜನೆಯನ್ನು ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಹಾಗೂ ಐಹೆಚ್‌ಎಸ್‌ಡಿಪಿ ಯೋಜನೆಯನ್ನು ರಾಜ್ಯದ ಇತರೆ 34 ನಗರ/ ಪಟ್ಟಣಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ವಿವರಗಳನ್ನು ಅನುಬಂಧ–2ರಲ್ಲಿ ನೀಡಲಾಗಿದೆ.

ಆ) **ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದಿಂದ :**

2008–09 ಮತ್ತು 2009–10ನೇ ಸಾಲಿನಲ್ಲಿ ನಗರ ಆಶ್ರಯ ಯೋಜನೆ ಜಾರಿಯಲ್ಲಿದ್ದು ಈ ಯೋಜನೆಯಡಿಯಲ್ಲಿ ಸರ್ಕಾರದಿಂದ ಯಾವುದೇ ಗುರಿಯನ್ನು ನೀಡಿರುವುದಿಲ್ಲ. 2010–11ನೇ ಸಾಲಿನಿಂದ ನಗರ ಆಶ್ರಯ ಯೋಜನೆಯನ್ನು ಮರುನಾಮಕರಣ ಮಾಡಿ **" ವಾಜಪೇಯಿ ನಗರ ವಸತಿ ಯೋಜನೆ"** ಎಂಬ ಹೆಸರಿನಲ್ಲಿ ಜಾರಿಗೆ ತರಲಾಗಿರುತ್ತದೆ. ಈ ಯೋಜನೆಯಡಿಯಲ್ಲಿ 2010–11ನೇ ಸಾಲಿಗೆ 49,500 ಮನೆಗಳ ಗುರಿಯನ್ನು ನಿಗದಿಪಡಿಸಿ, ಮೊಟ್ಟಮೊದಲ ಬಾರಿಗೆ ನಗರ ಪ್ರದೇಶದಲ್ಲಿ ರೂ. 50,000/– ಸಹಾಯಧನ ನೀಡಲಾಗುತ್ತಿದೆ. ಈ ಯೋಜನೆಯು ಸಂಪೂರ್ಣವಾಗಿ ರಾಜ್ಯ ಸರ್ಕಾರದ ಪ್ರಾಯೋಜಿಕತ್ವ ಯೋಜನೆಯಾಗಿದ್ದು ಕೇಂದ್ರ ಸರ್ಕಾರದಿಂದ ಯಾವುದೇ ಅನುದಾನ ಒದಗಿಸಿರುವುದಿಲ್ಲ.

ಈ ಯೋಜನೆಗಾಗಿ ರಾಜ್ಯ ಸರ್ಕಾರವು ಮಂಜೂರು ಮಾಡಿದ ಮತ್ತು ಖರ್ಚು ಮಾಡಿದ ಅನುದಾನದ ವಿವರ ಈ ಕೆಳಗಿನಂತೆ ಇರುತ್ತದೆ.

ರೂ. ಲಕ್ಷಗಳಲ್ಲಿ

ಶ್ರೇಣಿ	ಒದಗಿಸಲಾದ ಅನುದಾನ	ಸರ್ಕಾರದಿಂದ ಬಿಡುಗಡೆ ಮಾಡಲಾದ ಅನುದಾನ	ಖರ್ಚು ಮಾಡಲಾದ ಅನುದಾನ
2010–11	23500–00	11750.00	6873.87

ಕರ್ನಾಟಕ ಗೃಹ ಮಂಡಳಿ:

ಕರ್ನಾಟಕ ಗೃಹ ಮಂಡಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಯಾವುದೇ ಹಣ ಬಿಡುಗಡೆಯಾಗಿರುವುದಿಲ್ಲ. ಆದರೆ, ಕರ್ನಾಟಕ ಗೃಹ ಮಂಡಳಿಯು ವಿವಿಧ ವಸತಿ ಯೋಜನೆಗಳ ಅಡಿಯಲ್ಲಿ (ಹಳೆಯ ವಸತಿ ಯೋಜನೆ ಮತ್ತು 100 ವಸತಿ ಯೋಜನೆ) ಕಳೆದ ಮೂರು ವರ್ಷಗಳಲ್ಲಿ ಒಟ್ಟು 24048 ನಿವೇಶನಗಳನ್ನು ಹಾಗೂ 2013 ಮನೆಗಳನ್ನು ಹಂಚಿಕೆ ಮಾಡಲಾಗಿದೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ:

ಕಳೆದ ಮೂರು ವರ್ಷಗಳಲ್ಲಿ ಕೇಂದ್ರ ಪುರಸ್ಕೃತ ಜೆ.ಎನ್.ಎನ್.ಯು.ಆರ್.ಎಂ. – ಬಿಎಸ್‌ಯುಪಿ ಯೋಜನೆಯಡಿ ಬೆಂಗಳೂರು ನಗರದಲ್ಲಿ ಮೂಲಭೂತ

ಸೌಕರ್ಯಗಳೊಂದಿಗೆ 18180 ಮನೆಗಳನ್ನು ಮೈಸೂರು ನಗರದಲ್ಲಿ 6328 ಮನೆಗಳ ನಿರ್ಮಾಣದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಹಾಗೂ ಕೇಂದ್ರ ಪುರಸ್ಕೃತ ಜೆ.ಎನ್.ಎನ್.ಯು.ಆರ್.ಎಂ. ಐ.ಹೆಚ್.ಎಸ್.ಡಿ.ಪಿ. ಯೋಜನೆಯಡಿ ರಾಜ್ಯದ ಇತರೆ 34 ನಗರ/ಪಟ್ಟಣಗಳಲ್ಲಿ ಮೂಲಭೂತ ಸೌಕರ್ಯ ಗಳೊಂದಿಗೆ 17237 ಮನೆಗಳನ್ನು ನಿರ್ಮಿಸುವ ಕಾಮಗಾರಿಯನ್ನೂ ಸಹಾ ಅನುಷ್ಠಾನಗೊಳಿಸಲಾಗುತ್ತಿದೆ. ಒಟ್ಟಾರೆ ಮೂಲಭೂತ ಸೌಲಭ್ಯಗಳೊಂದಿಗೆ 41745 ಮನೆಗಳ ನಿರ್ಮಾಣ ಕಾಮಗಾರಿಯನ್ನು ಮಂಡಳಿವತಿಯಿಂದ ಕೈಗೆತ್ತಿಕೊಂಡಿದ್ದು, ಇವುಗಳ ಪೈಕಿ 22656 ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಹಾಗೂ 13184 ಮನೆಗಳು ಪ್ರಗತಿಯಲ್ಲಿರುತ್ತವೆ ಮತ್ತು 13377 ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿರುತ್ತದೆ.

ಸದರಿ ಯೋಜನೆಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ರೂ. 1138.54 ಕೋಟಿಗಳಿಗೆ ಮಂಜೂರು ಮಾಡಿದ್ದು, ಈವರೆವಿಗೂ ರೂ. 652.71 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ಇಲ್ಲಿಯವರೆವಿಗೂ ರೂ. 638.13 ಕೋಟಿಗಳನ್ನು ವೆಚ್ಚ ಮಾಡಲಾಗಿರುತ್ತದೆ.

ಇ) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದಿಂದ:

ಕಳೆದ ಮೂರು ವರ್ಷಗಳಲ್ಲಿ ನಗರ ಪ್ರದೇಶದಲ್ಲಿ ಜಿಲ್ಲಾಧಿಕಾರಿಗಳು ಒಟ್ಟು 602.19 ಎಕರೆ ಸರ್ಕಾರಿ ಜಮೀನು ಮತ್ತು 779.83 ಎಕರೆ ಖಾಸಗಿ ಜಮೀನು ಖರೀದಿಸಿ ಒಟ್ಟು 1382.02 ಎಕರೆ ಜಮೀನು ಒದಗಿಸಲಾಗಿರುತ್ತದೆ.

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ–3 ರಲ್ಲಿ ನಿಡಲಾಗಿದೆ.

ಕರ್ನಾಟಕ ಗೃಹ ಮಂಡಳಿ:

ಕರ್ನಾಟಕ ಗೃಹ ಮಂಡಳಿ ವತಿಯಿಂದ ಕಳೆದ ಮೂರು ವರ್ಷಗಳಲ್ಲಿ ಸ್ವಾಧೀನಕ್ಕೆ ಪಡೆದ ಜಮೀನಿನ ವಿವರ ಕೆಳಕಂಡಂತೆ ಇರುತ್ತದೆ.

ಕ್ರ. ಸಂ.	ಸಾಲು	ವಿಸ್ತೀರ್ಣ ಎ–ಗುಂ
1	2008–09	467.15
2	2009–10	214.38
3	2010–11	398.03
	ಒಟ್ಟು	1080.16

ವಿವರಗಳನ್ನು ಅನುಬಂಧ–4 ರಲ್ಲಿ ನೀಡಲಾಗಿದೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ :

ಕಳೆದ ಮೂರು ವರ್ಷಗಳಿಂದ ಮಂಡಳಿಗೆ ಸರ್ಕಾರ/ಸ್ಥಳೀಯ ನಗರಾಭಿವೃದ್ಧಿ ಪ್ರಾಧಿಕಾರ ನೀಡಿರುವ ಜಮೀನುಗಳ ಜಿಲ್ಲಾವಾರು ವಿವರಗಳನ್ನು ಈ ಕೆಳಕಂಡಂತಿರುತ್ತದೆ.

ಜಿಲ್ಲೆಗಳ ಹೆಸರು	ಎಕರೆ	ಗುಂಟೆ
ಬೆಂಗಳೂರು ನಗರ ಜಿಲ್ಲೆ	29	38
ಮೈಸೂರು ಜಿಲ್ಲೆ	34	26
ಮಂಡ್ಯ ಜಿಲ್ಲೆ	20	33
ಹಾಸನ ಜಿಲ್ಲೆ	0	02
ಬಿಜಾಪುರ ಜಿಲ್ಲೆ	5	33
ಕೊಪ್ಪಳ ಜಿಲ್ಲೆ	1	10
ಗದಗ್ ಜಿಲ್ಲೆ	13	10
ಒಟ್ಟು	84	152

BBMP ವ್ಯಾಪ್ತಿಯಲ್ಲಿ ಪಡಿತರ ಕಾರ್ಡ್‌ಗಳ ವಿತರಣಾ ವ್ಯವಸ್ಥೆ

173 (538) ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ):– ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬಿಬಿಎಂಪಿ ವ್ಯಾಪ್ತಿಗೆ ಬರುವ 28 ವಿಧಾನಸಭಾ ಕ್ಷೇತ್ರಗಳಲ್ಲಿ ಪಡಿತರ ಕಾರ್ಡ್‌ಗಳ ವಿತರಣೆಗಾಗಿ ವಿಶೇಷ ಕಾರ್ಯಕ್ರಮಗಳೇನ್ನೇನಾದರೂ ಇಲಾಖೆಯು ಹಮ್ಮಿಕೊಂಡಿದೆಯೇ; ಈ ವ್ಯಾಪ್ತಿಗೆ ಸಂಬಂಧಪಟ್ಟಂತೆ ಆನ್‌ಲೈನ್ ವ್ಯವಸ್ಥೆ ಸೇರಿದಂತೆ ಕೈಗೊಳ್ಳಲಿರುವ ವ್ಯವಸ್ಥಿತ ಕ್ರಮಗಳೇನು;

ಆ) ಆನ್‌ಲೈನ್ ವ್ಯವಸ್ಥೆಯಲ್ಲಿ ಅನಕ್ಷರಸ್ಥರನ್ನು ಪುನ: ಸಮಸ್ಯೆಗಳಿಗೆ ಒಡ್ಡದಂತೆ ಮತ್ತು ಯಾವುದೇ ವಿಳಂಬವು ವಿತರಣೆಯಲ್ಲಿ ಆಗದಂತೆ ಸರ್ಕಾರ ರೂಪಿಸಿದ ಕಾರ್ಯ ಯೋಜನೆಗಳು ಯಾವುವು;

ಇ) ಇಲಾಖೆಯವರು ಸೀಮೆಎಣ್ಣೆ ಮತ್ತು ಗ್ಯಾಸ್ ಸಿಲಿಂಡರ್‌ಗಳ ವಿಚಾರದಲ್ಲಿ